ಹೋಗ್ತಿ? ಬೆಂಗಳೂರು ಅಂದ್ರ ನಿನ್ನ ಹಂಗ ಹಿಡಕೊಂಡೈತೇನು? ಅಥವಾ ದೀಪಾ ಹಿಡಕೊಂಡಾಳೋ?' ಸುಶೀಲಾಳ ಅಕ್ಕರೆ, ಅವಳ ಮುನಿಸು ನೆನಪಾಗುವವು. ಅವಳು ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳಲಾರಳು. ಗಂಡನನ್ನು ಬಿಟ್ಟು ಬಂದು ನಿರ್ಭಿಡೆಯಿಂದ ಬದುಕುತ್ತಿದ್ದಾಳೆ. ತಾನು ಮಾತ್ರ ಎಲ್ಲವನ್ನೂ ಒಳಗಿಟ್ಟುಕೊಂಡು ಕೊರಗುತ್ತೇನೆ. ಮನಸ್ಸು ಖಾಲಿ ಖಾಲಿಯಾದಂತೆ ಅನಿಸಿತು. ಆದರೂ ಇದನ್ನು ಇಷ್ಟಕ್ಕೆ ಬಿಡಬಾರದು. ನಾಗರಾಜ ಎಂದರೆ ಏನೆಂದು ಮಾವನಿಗೆ ಗೊತ್ತುಪಡಿಸಬೇಕು. ಅವನು ಅವಡುಗಚ್ಚಿ ಬೆರಳಿನಿಂದ ರಕ್ತ ಒರೆಸಿಕೊಂಡ. ಇಷ್ಟು ದೊಡ್ಡ ಅಧಿಕಾರಿಯಾದ ತಾನು ಸುಮ್ಮನೆ ಉದ್ವೇಗಕ್ಕೆ ಒಳಗಾಗಬಾರದೆಂಬ ಯೋಚನೆಯೂ ನುಸುಳಿತು. ಕೆಸರಿನಲ್ಲಿ ಕಲ್ಲು ಚೆಲ್ಲಿದರೆ ಏನು ಪ್ರಯೋಜನ? ಒಳಗೆ ಹತ್ತಿಕೊಂಡಿದ್ದ ಬೆಂಕಿ ಭುಗಿಲೇಳುತ್ತಿತ್ತು. ತಮ್ಮ ದುಡ್ಡಿಗೆ ಮಾವ ಸರಿಯಾದ ಲೆಕ್ಕ ಕೊಡುತ್ತಿಲ್ಲವೆಂದು ಹೆಂಡತಿ ದೂರಿದಾಗಲೆ ತಾನು ಕಾಳಜಿ ವಹಿಸಬೇಕಾಗಿತ್ತೆಂದು ಈಗ ಅನಿಸುತ್ತಿದೆ. ಊರಿಗೆ ಬಂದಾಗ ಪ್ರತಿಯೊಂದನ್ನೂ ಅವಳು ಪರೀಕ್ಷಿಸತೊಡಗಿದ್ದಳು. ಲೆಕ್ಕಾಚಾರ ಹಾಕುತ್ತಿದ್ದಳು. ತನಗದು ಸಾಧ್ಯವಾಗುತ್ತಿರಲಿಲ್ಲ. ತಾಯಿ, ತಂಗಿ, ತಮ್ಮಂದಿರಿಗೆಂದು ತಾವು ಕೊಡುತ್ತಿದ್ದ ಹಣವನ್ನು ಮಾವನ ಕೈಯಲ್ಲಿಯೇ ಕೊಡಬೇಕಾಗುತ್ತಿತ್ತು. ಊರಲ್ಲಿಯ ಬೇರೆ ಮನೆಗಳಿಗಿಂತ ತಮ್ಮ ಮನೆ ಮುಂದಿರಬೇಕು ಎಂದು ಹೊಲ, ಮನೆ ಹಿಡಿದೆವು. ಅದೂ ಎಲ್ಲ ಮಾವನ ಹೆಸರಿನಲ್ಲಿಯೇ. ಅವನ ಹೆಸರಿನಲ್ಲಿದ್ದರೇನು? ತಮ್ಮ ಹೆಸರಿನಲ್ಲಿದ್ದರೇನು? ಎಲ್ಲ ಒಂದೇ ಅಲ್ಲವೆ? ಊರಲ್ಲಿ ಮನೆ ನಡೆಸುವವನು ಅವನೇ ಅಲ್ಲವೆ? ಹೊಲಕ್ಕೆ ರಂಟೆ ಹೊಡಿಸುವವನು ಅವನು. ಕುಂಟೆ ಹೂಡುವವನು ಅವನು. ಬಾವಿ ತೆಗೆಸುವವನು ಅವನು. ನೀರು ಸೇದುವವನು ಅವನು. ಎಣ್ಣೆ –ಉಪ್ಪು –ಖಾರ –ಹಿಟ್ಟು ಎಂದೆಲ್ಲ ವಾರವಾರವೂ ಹುಬ್ಬಳ್ಳಿಯಿಂದ ಮನೆಗೆ ಸಂತೆ ತಂದು ಚೆಲ್ಲುವವನು ಅವನೇ ಅಲ್ಲವೆ? ತಾನು ತಿರುಗಿ ಮಾತನಾಡಬೇಕೆಂದರೆ ತನ್ನ ಬಾಯಿ ಕಟ್ಟುತ್ತದೆ. ದೀಪಾಳಿಗೆ ಇದೆಲ್ಲ ತಿಳಿಯುವುದಿಲ್ಲ. ಹೇಳಹೋದರೆ ತನ್ನ ಮೇಲೆ ಅಮರಿಕೊಂಡು ಬೀಳುತ್ತಾಳೆ.

ಅಪ್ಪ ಅಚಾನಕ್ ಆಗಿ ಸತ್ತ ಮೇಲೆ ಅವ್ವನೇ ಊರಿನಲ್ಲಿದ್ದ ತನ್ನ ತಮ್ಮನನ್ನು ಕರೆಸಿದ್ದಳು. ಯಾಕೆಂದರೆ ಅವಳ ತವರಿನಲ್ಲಿಯೂ ಅಷ್ಟಕ್ಕಷ್ಟೆ. ಕೂಲಿಗೆ ಹೋಗಬೇಕು. ದುಡಿದು ಬಂದು ಅಂಬಲಿ ಉಣ್ಣಬೇಕು. ತಮ್ಮೂರು ಜಾಂಬೂರಿನಲ್ಲಿ ಅಪ್ಪ ಬಿಟ್ಟು ಹೋದ ತುಸು ಭೂಮಿಯಾದರೂ ಇದೆ. ಶಂಕರಪ್ಪ ಮಾವ ಬರದಿದ್ದರೆ ತಮ್ಮನ್ನು ಯಾರು ನೋಡಿಕೊಳ್ಳುತ್ತಿದ್ದರು? ಯಾರ್‍ಯಾರೋ ಹೊಲವನ್ನು, ತಮ್ಮನ್ನು ಕಿತ್ತು ತಿನ್ನುತ್ತಿದ್ದರು. ಮಾವನ ಊರು ಇದೇ ಆಗಿಬಿಟ್ಟಿತು. ಅವನು ಇಲ್ಲಿಯೇ ಮದುವೆಯಾದ. ತಮ್ಮನ ಹೆಂಡತಿಯ ಹೆರಿಗೆಯನ್ನು ಅವ್ವ ತಾನೇ ಮಾಡಿದಳು. 'ನಿಮ್ಮ ಅವ್ವಗ ಮಗನಿಗಿಂತ ತಮ್ಮನೇ ಹೆಚ್ಚಾದ... ಆಕೀಗಿ ಮಗನ ಕಲ್ಯಾಣ ಬೇಕಾಗಿಲ್ಲ...' ದೀಪಾ ಆಡಿಕೊಳ್ಳುತ್ತಿದ್ದಳು. ತನ್ನನ್ನು ಅಷ್ಟು ಪ್ರೀತಿಯಿಂದ ಸಾಕಿದ್ದ ಅವ್ವ, ದೀಪಾಳನ್ನು ಮದುವೆಯಾಗುತ್ತೇನೆಂದದ್ದೇ ತಡ, ಮುನಿಸಿಕೊಂಡಿದ್ದಳು. ಮದುವೆಗೂ ಬರಲಿಲ್ಲ. ಒಂದಿಬ್ಬರು ಸ್ನೇಹಿತರನ್ನು ಬಿಟ್ಟರೆ ಊರವರು ಯಾರೂ ಬರಲಿಲ್ಲ. ಜನಸಾಗರದಿಂದ ತುಳುಕುತ್ತಿದ್ದ ಕಲ್ಯಾಣ ಮಂಟಪದಲ್ಲಿ ಪರಿಚಿತರಿಲ್ಲದೆ ತಾನು ಒಂಟಿಯಾಗಿದ್ದೆ!

ಇಂದು ಕೂಡ ಹಾಗೆಯೇ ಅನಿಸುತ್ತಿದೆ. ಬಸ್‌ಸ್ಟ್ಯಾಂಡಿನ ಇಷ್ಟೊಂದು ದೊಡ್ಡ ಜನಸಾಗರದಲ್ಲಿ ಪರಿಚಯದವರ್‍ಯಾರೂ ಎದುರು ಬರುತ್ತಿಲ್ಲ. ನಾಗರಾಜನಿಗೆ